ಕೋಟಿ ರೂಪಾಯಿ ಹಣದಲ್ಲಿ ಕಟ್ಟಿರತಕ್ಕ ಕಟ್ಟಡದಲ್ಲಿ ಖಾಸಗಿ ಇಂಜಿನಿಯರಿಂಗ್ ಕಾಲೇಜುಗಳನ್ನು ನಡೆಸುತ್ತಿದ್ದಾರೆ. ಇದರ ಬಗ್ಗೆ ತಾವು ಕ್ರಮ ಕೈಗೊಳ್ಳುವುದಕ್ಕೆ ಸಾಧ್ಯವೆ ? ಎರಡನೆಯದಾಗಿ, 3 ಕೋಟಿ ರೂಪಾಯಿ ವೆಚ್ಚದಲ್ಲಿ ಕಟ್ಟಿರತಕ್ಕ ವಿಧಾನಸೌಧಕ್ಕೆ ಹತ್ತಿರವಾಗಿರತಕ್ಕ ಹೆಣ್ಣುಮಕ್ಕಳ ವಸತಿ ನಿಲಯ ದುರುಪಯೋಗವಾಗುತ್ತಿದೆ. ಅದನ್ನು ಯಾವ ಉದ್ದೇಶಕ್ಕೋಸ್ಕರ ಕಟ್ಟಿದ್ದಾರೆ ಅದರ ಉಪಯೋಗವಾಗದೆ ಇರುವುದರ ಬಗ್ಗೆ ಸರ್ಕಾರ ಏನು ಕ್ರಮ ಕೈಗೊಳ್ಳುತ್ತದೆ ?

ಶ್ರೀ ಧರ್ಮಸಿಂಗ್:– ಉಪನಾಯಕರು ಏನು ಪ್ರಸ್ತಾಪ ಮಾಡಿದ್ದಾರೆ. ಅದು ನನ್ನ ಗಮನಕ್ಕೆ ಬಂದಿದೆ. ಕರ್ನಾಟಕ ರಾಜ್ಯದಲ್ಲಿ ಉದ್ಯೋಗ ಮಾಡತಕ್ಕ ಹೆಣ್ಣು ಮಕ್ಕಳಿಗೆ ವಸತಿ ನಿಲಯ ಕೊಡತಕ್ಕದ್ದು ನಮ್ಮ ಕೆಲಸವಾಗಿದೆ. ಕೇಂದ್ರ ಸರ್ಕಾರ ಅದಕ್ಕೆ ಗ್ರಾಂಟ್ ಕೊಡುತ್ತಿದೆ. ಇಲ್ಲಿ ಎರಡು ಕಡೆ ಮತ್ತು ಬೇರೆ ಕಡೆ ಎಲ್ಲಿ ಹೆಣ್ಣು ಮಕ್ಕಳಿಗೆ ವರ್ಕಿಂಗ್ ವುಮೆನ್ಸ್ ಹಾಸ್ಟೆಲ್ ಆಗಿ ಕೊಟ್ಟಿದ್ದೇವೆ ಅಲ್ಲಿ ಇಂಜಿನಿಯರಿಂಗ್ ಕಾಲೇಜ್, ಆಗಲಿ ಅಥವಾ ಬೇರೆ ವಿಷಯಕ್ಕೆ ಆ ಕಟ್ಟಡವನ್ನು ಉಪಯೋಗಿಸುತ್ತಿದ್ದರೆ ಅದರ ಮೇಲೆ ನೇರವಾಗಿ ಕ್ರಮ ಕೈಗೊಳ್ಳುತ್ತೇವೆ.

ಶ್ರೀಮತಿ ದಮಯಂತಿ ಬೋರೇಗೌಡ:– ಮಂಡ್ಯದಲ್ಲಿ ಒಂದು ಖಾಸಗಿ ರಿಜಿಸ್ಟರ್ಡ್ ಸಂಸ್ಥೆ ನಡೆಸುತ್ತಿರುವ ವರ್ಕಿಂಗ್ ವುಮೆನ್ ಹಾಸ್ಟೆಲಿಗೆ 15 ಲಕ್ಷ ರೂಪಾಯಿ ಎಸ್ಟಿಮೇಟ್ ಆಗಿದೆ. ಇವತ್ತು 15 ಲಕ್ಷ ರೂಪಾಯಿಗಳಿಗೆ ಬಿಲ್ಡಿಂಗ್ ಆಗುವುದು ಶ್ರಮದ ಕೆಲಸ. ಅಂಥದ್ದರಲ್ಲಿ ಅದಕ್ಕೆ ಚೀಫ್ ಇಂಜಿನಿಯರಿಂಗ್ ಅಪ್ರೂವಲ್ ಬೇಕೆಂದು ಹೇಳುತ್ತಾರೆ. 0.5 ಪರ್ಸೆಂಟ್ ನಾವು ಕಟ್ಟಬೇಕು. ಇದು ಸಾಧ್ಯವೆ ? ಇದಕ್ಕೆ ವಿನಾಯಿತಿ ಕೊಡುತ್ತೀರಾ ?

ಶ್ರೀ ಧರ್ಮಸಿಂಗ್:– ನಿನ್ನೆ ಕೂಡ ಅಧಿಕಾರಿಗಳ ಜೊತೆಯಲ್ಲಿ ಸಮಾಲೋಚನೆ ಮಾಡತಕ್ಕ ಕಾಲದಲ್ಲಿ ಹೇಳಿದ್ದೇನೆ. ಮೊದಲು ಏನು ಎಸ್ಟಿಮೇಟ್ ಪ್ರಿಪೇರ್ ಮಾಡಿದ್ದಾರೆ ಅದರಂತೆ 10-15 ಲಕ್ಷ ರೂಪಾಯಿಗಳಲ್ಲಿ ಆಗುವುದಿಲ್ಲ, 25 ಲಕ್ಷ ರೂಪಾಯಿಗಳಿಗಿಂತ ಹೆಚ್ಚು ಬೇಕಾಗುತ್ತದೆ. ಅದನ್ನು ಕೂಡ ನಾವು ಮಾಡುತ್ತೇವೆ.

ತುರುವೇಕೆರೆ ತಾಲ್ಲೂಕಿನಲ್ಲಿ ಕಾನೂನು ಬಾಹಿರವಾಗಿ ಕಲ್ಲುಗಳ ಕೊರೆಯುವಿಕೆ

352 (1733): ಶ್ರೀ ಎಸ್. ರುದ್ರಪ್ಪ (ತುರುವೇಕೆರೆ):–

ಮಾನ್ಯ ಗಣಿ ಮತ್ತು ಭೂವಿಜ್ಞಾನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ತುರುವೇಕೆರೆ ತಾಲ್ಲೂಕು ಭೈತರ ಹೊಸಹಳ್ಳಿ ಬಂಡೆಯಲ್ಲಿ ಪರವಾನಗಿ ಇಲ್ಲದೇ ಕಲ್ಲನ್ನು ಮಾರುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ ಆ ಬಗ್ಗೆ ಸರ್ಕಾರದವರು ಯಾವ ಕ್ರಮವನ್ನು ತೆಗೆದುಕೊಂಡಿರುವರು ?

ಶ್ರೀ ಡಿ.ಬಿ. ಚಿಣ್ಣಪ್ಪ (ಗಣಿ ಮತ್ತು ಭೂವಿಜ್ಞಾನ ರಾಜ್ಯ ಸಚಿವರು):–

ಅ) ಬಂದಿದೆ.

ಆ) ಕಲ್ಲು ಗಣಿಗಾರಿಕೆಯನ್ನು ನಿಲ್ಲಿಸಲಾಗಿದೆಯಲ್ಲದೇ ಗಣಿಗಾರಿಕೆಗೆ ಉಪಯೋಗಿಸುವ ಯಂತ್ರೋಪಕರಣಗಳನ್ನು ವಶಪಡಿಸಿಕೊಳ್ಳಲಾಗಿದೆ. ಮತ್ತು ಗುತ್ತಿಗೆಗಳಿಂದ ಅರ್ಜಿ ಹಾಕಿ ಅಧಿಸೂಚನೆಗಳನ್ನು ಪಡೆದು ಗುತ್ತಿಗೆ ಕರಾರನ್ನು ಮಾಡಿಕೊಳ್ಳದವರ ಅಧಿಸೂಚನೆಯನ್ನು ರದ್ದುಪಡಿಸಿ,

ಕೆಲಸ ನಿಲ್ಲಿಸಿ ಭದ್ರತಾ ಠೇವಣಿಯನ್ನು ಮುಟ್ಟುಗೋಲು ಹಾಕಿಕೊಳ್ಳಲಾಗಿದೆ. ಕಾನೂನು ತಿದ್ದುಪಡಿ ನಿಯಮಗಳನ್ವಯ ಪಟ್ಟ ಭೂಮಿಗಳಲ್ಲಿ ನಡೆಯುತ್ತಿದ್ದ ಕಲ್ಲು ಕೆಲಸವನ್ನೂ ಸಹಾ ನಿಲ್ಲಿಸಲಾಗಿದೆ.

ಶ್ರೀ ಎಸ್. ರುದ್ರಪ್ಪ:– ತುರುವೇಕೆರೆ ಬೈತರ ಹೊಸಳ್ಳಿ ಎಂಬ ಗ್ರಾಮದಲ್ಲಿ ಒಂದು ಬಂಡೆ ಇದೆ. ಆ ಬಂಡೆಯಲ್ಲಿ ಅನೇಕ ವರ್ಷಗಳಿಂದ ಕಲ್ಲುಗಳನ್ನು ಕದ್ದು ಹೊಡೆಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ಎಂದರೆ ಬಂದಿದೆ ಎಂದು ಹೇಳಿದ್ದಾರೆ. ಬಂದಿದ್ದರೆ ಏನು ಕ್ರಮ ತೆಗೆದುಕೊಂಡಿದ್ದೀರಿ ಎಂದು ಕೇಳಿದ್ದೇನೆ. ಅದಕ್ಕೆ ಗಣಿಗಾರಿಕೆಯನ್ನು ನಿಲ್ಲಿಸಲಾಗಿದೆ. ಗಣಿಗಾರಿಕೆಗೆ ಉಪಯೋಗಿಸುವ ಯಂತ್ರೋಪಕರಣಗಳನ್ನು ವಶಪಡಿಸಿಕೊಳ್ಳಲಾಗಿದ ಎಂದು ಹೇಳಿದ್ದಾರೆ. ಯಾವ ಯಾವ ಯಂತ್ರೋಪಕರಣಗಳನ್ನು ವಶಪಡಿಸಿಕೊಂಡಿದ್ದಾರೆ ಮತ್ತು ಎಷ್ಟು ಯಂತ್ರೋಪಕರಣಗಳನ್ನು ವಶಪಡಿಸಿಕೊಂಡಿದ್ದೀರಾ ? ಎರಡನೆಯದಾಗಿ, ಕೆಲಸ ನಲ್ಲಿಸಿ ಭದ್ರತಾ ಠೇವಣಿಯನ್ನು ಮುಟ್ಟುಗೋಲು ಹಾಕಿಕೊಂಡಿದೆ ಎಂದು ಹೇಳಿದ್ದಾರೆ. ಎಷ್ಟು ಜನರ ಭದ್ರತಾ ಠೇವಣಿಯನ್ನು ಮುಟ್ಟುಗೋಲು ಹಾಕಿಕೊಂಡಿದ್ದಾರೆ ? ಪ್ರೈವೇಟ್ ಭೂಮಿಯಲ್ಲಿ ಕಲ್ಲು ಒಡೆಯುವವರನ್ನು ನಿಲ್ಲಿಸಿದ್ದೇವೆಂದು ಹೇಳಿದ್ದಾರೆ. ಪ್ರೈವೇಟ್ ಭೂಮಿಯಲ್ಲಿ ಕಲ್ಲು ಇಲ್ಲ. ಸರ್ಕಾರದ ಜಮೀನಿನಲ್ಲಿ ಕಲ್ಲು ಇದೆ. ಅದು ಒಂದು ಮೀಟರ್‌ಗೆ 25 ಸಾವಿರ ರೂಪಾಯಿ ಬೆಲೆ ಬಾಳತಕ್ಕ ಕಲ್ಲು. ಅದನ್ನು ಕದ್ದು ಹೊಡೆದು, ರಾತ್ರಿ ಎಲ್ಲಾ ಲಾರಿಗಳ ಮೂಲಕ ಸಾಗಿಸುತ್ತಿದ್ದಾರೆ. ಅಧಿಕಾರಿಗಳಿಗೆ ಹೇಳಿದ್ದರೂ ಅದನ್ನು ಅಧಿಕಾರಿಗಳು ಗಮನಕ್ಕೆ ತೆಗೆದುಕೊಂಡಿಲ್ಲ. ನಿಲ್ಲಿಸಿಯೂ ಇಲ್ಲ. ಇನ್ನೂ ನಡೆಯುತ್ತಿದೆ. ಇದರ ಬಗ್ಗೆ ಏನು ಕ್ರಮ ತೆಗೆದುಕೊಂಡಿದ್ದೀರಿ ? ಠೇವಣಿಯನ್ನು ಮುಟ್ಟುಗೋಲು ಹಾಕಿಕೊಂಡಿದ್ದೀರಾ ?

ಶ್ರೀ ಡಿ.ಎ. ಚಿಣ್ಣಪ್ಪ:– ಮಾನ್ಯ ಅಧ್ಯಕ್ಷರೆ, ಅವರ ಕತ್ತಿ, ಗುದ್ದಲಿ ಮತ್ತಿತರ ಸಾಮಾನುಗಳನ್ನು ಮುಟ್ಟುಗೋಲು ಹಾಕಿಕೊಂಡಿದ್ದೇವೆ. 6 ಜನ ಕೆಲಸ ಮಾಡುತ್ತಿದ್ದರು. ಅವರಲ್ಲಿ ಇಬ್ಬರಿಗೆ ಮಾತ್ರ ಪರವಾನಗಿ ಕೊಟ್ಟಿದ್ದೇವೆ. ಪರವಾನಗಿ ಇಲ್ಲದೆ ಅಗ್ರಿಮೆಂಟ್ ಮಾಡಿದ್ದಕ್ಕೋಸ್ಕರ, ಇಲ್ಲೀಗಲ್ ಕ್ವಾರಿ ಮಾಡಿದ್ದರಿಂದ ಅದನ್ನು ತಡೆಹಿಡಿದು ನಾವು ಮುಟ್ಟುಗೋಲು ಹಾಕಿ 29ಸಾವಿರ ರೂಪಾಯಿ ರಾಯಲ್ಟಿ ವಸೂಲ್ಮಾಡುವುದನ್ನು ನಿಲ್ಲಿಸಿದ್ದೇವೆ. ಅನಂತರ ಲ್ಯಾಂಡ್ ರೆವಿನ್ಯೂ ಆ್ಯಕ್ಟಿನ ಸೆಕ್ಷನ್ 70ನ್ನು ಅಮೆಂಡ್‌ಮೆಂಟ್ ಮಾಡಿದ ಮೇಲೆ ಆ ಕಲ್ಲುಗಳನ್ನು ಪ್ರೈವೇಟ್ ಲ್ಯಾಂಡ್‌ನಲ್ಲಿ ತೆಗೆಯತಕ್ಕದ್ದನ್ನು ಸಂಪೂರ್ಣವಾಗಿ ನಿಲ್ಲಿಸಿದ್ದೇವೆ.

ಶ್ರೀ ಎಸ್. ರುದ್ರಪ್ಪ:– ಮನೆಗಳಿಗೆ ಕಲ್ಲು ಒಡೆಯುವವರ ಹಾರೆ, ಗುದ್ದಲಿ, ಇವುಗಳನ್ನು ಮುಟ್ಟುಗೋಲು ಹಾಕಿಕೊಂಡಿದ್ದಾರೆ. ಅವರನ್ನು ನಾನು ಕೇಳಿಲ್ಲ. ಒಂದು ಮೀಟರ್‌ಗೆ 25 ಸಾವಿರ ರೂಪಾಯಿ ಬೆಲೆ ಬಾಳುವ ಕಲ್ಲು ಏನು ಒಡೆಯುತ್ತಿದ್ದಾರೆ ಅವರನ್ನು ಇವರು ಹಿಡಿದಿಲ್ಲ. ಅವರು ರಾತ್ರಿ ಹೊತ್ತು ಕದ್ದು ಕಲ್ಲು ಹೊಡೆಯುತ್ತಲೇ ಇದ್ದಾರೆ. ಬಡವರು ಬೋವಿಗಳು ಬೆಳಗಿನಿಂದ ಸಂಜೆಯವರೆಗೆ ಕೆಲಸ ಮಾಡಿ ಮನೆಗಳಿಗೆ ಬೇಕಾದ 500-1000 ಕಲ್ಲುಗಳನ್ನು ಒಡೆದುಕೊಡುತ್ತಾರೆ. ಅಂಥವರನ್ನು ಇವರು ಹಿಡಿದಿದ್ದಾರೆ. ಇದು ಸರಿಯಾದುದಲ್ಲ. ಕಳ್ಳ ಖದೀಮರನ್ನು ಹಿಡಿಯಬೇಕು. ರಾತ್ರಿ ಹೊತ್ತು ಒಡೆಯುವವರನ್ನು ಹಿಡಿಯಬೇಕು.

ಶ್ರೀ ಡಿ.ಎ. ಚಿಣ್ಣಪ್ಪ:– ಗ್ರಾನೈಟ್ ಕಲ್ಲುಗಳನ್ನು ಪ್ರೈವೇಟ್ ಪಟ್ಟಾ ಲ್ಯಾಂಡ್‌ನಲ್ಲಿ ಏನು ತೆಗೆಯುತ್ತಿದ್ದರು ಅದನ್ನು ಆರ್ಡಿನೆನ್ಸ್ ಆದಮೇಲೆ ಕಂಪ್ಲೀಟ್ ಆಗಿ ನಿಲ್ಲಿಸಿದ್ದೇವೆ. ಅದನ್ನು ತೆಗೆಯುವುದಕ್ಕೆ ಆಗುತ್ತಿಲ್ಲ. ಕಲ್ಲು ಕೊರೆಯುವುದನ್ನು ಯಾರು ಮಾಡುತ್ತಿದ್ದಾರೆ. ಅವರು ಅಗ್ರಿಮೆಂಟ್ ಬರೆದುಕೊಡದೆ ಇಲ್ಲೀಗಲ್ ಆಗಿ ಮಾಡುತ್ತಿದ್ದರು. ಅವರನ್ನು ಇಲ್ಲೀಗಲ್ ಆಗಿ ಮಾಡಕೂಡದೆಂದು ನಿಲ್ಲಿಸಿದ್ದೇವೆ.

ಶ್ರೀ ಎಸ್. ವೀರಭದ್ರಪ್ಪ:– ನನ್ನ ಜೊತೆ ಬಂದರೆ ನಾನು ಹಿಡಿದುಕೊಡುತ್ತೇನೆ.

ಅಧಿಕಾರಿಗಳೂ ಇದಕ್ಕೆ ಶಾಮೀಲಾಗಿ ಕೆಲಸ ಮಾಡುತ್ತಿದ್ದಾರೆ. ಇದನ್ನು ಆತಿ ಶೀಘ್ರದಲ್ಲಿ ನಿಲ್ಲಿಸಬೇಕೆಂದು ಹೇಳುತ್ತೇನೆ.

ಶ್ರೀ ಡಿ.ಪಿ. ಚಿಣ್ಣಪ್ಪ:– ಮಾನ್ಯ ಅಧ್ಯಕ್ಷರೇ, ಅವರು ಏನು ಹೇಳಿದ್ದಾರೆ. ಅವರ ಬಗ್ಗೆ ಕಾರ್ಯಕ್ರಮ ತೆಗೆದುಕೊಳ್ಳುವುದಕ್ಕೆ ನಾನು ಅಧಿಕಾರಿಗಳಿಗೆ ಸೂಚನೆಯನ್ನು ಕೊಡುತ್ತೇನೆ.

ಹಾಸನ ನಗರದಲ್ಲಿ ಗೃಹ ಮಂಡಲಿಯಿಂದ ಮನೆಗಳ ನಿರ್ಮಾಣ

353 (1734): ಶ್ರೀ ಬಿ. ಶಿವರಾಮು (ಗಂಡಸಿ):–

ಮಾನ್ಯ ವಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಗೃಹ ಮಂಡಳಿಯಿಂದ ಹಾಸನ ನಗರದಲ್ಲಿ ನಿರ್ಮಿಸುತ್ತಿರುವ ಮನೆಗಳ ಸಂಖ್ಯೆ ಎಷ್ಟು ಮತ್ತು ಯಾವ ಹಂತದಲ್ಲಿವೆ ?

ಆ) ನಾಲ್ಕು ತಿಂಗಳಿಂದ ಮನೆಗಳ ನಿರ್ಮಾಣಕ್ಕಾಗಿ ಪಾವತಿ ಮಾಡಿರುವ ಹಣವೆಷ್ಟು ಮತ್ತು ಸಾಕಷ್ಟು ಪ್ರಮಾಣದಲ್ಲಿ ಮಾಡದಿದ್ದರೆ ಅದಕ್ಕೆ ಕಾರಣವೇನು;

ಇ) ಮನೆಗಳಿಗಾಗಿ ನಗರದ ಜನರಿಂದ ಅರ್ಜಿಗಳನ್ನು ಪಡೆದು ಎಷ್ಟು ವರ್ಷಗಳಾಗಿವೆ ಮತ್ತು ಎಷ್ಟು ಅರ್ಜಿಗಳು ಬಂದಿವೆ ಹಾಗೂ ಪಡೆದಿರುವ ಹಣವೆಷ್ಟು ? (ವಿವರ ನೀಡುವುದು)

ಈ) ಸಾಕಷ್ಟು ಮನೆಗಳನ್ನು ಅರ್ಜಿಗೆ ತಕ್ಕಂತೆ ಕಟ್ಟದಿದ್ದಲ್ಲಿ ಮುಂದಿನ ಕ್ರಮವೇನು ?

ಶ್ರೀ ಆರ್. ಗೋಪಿನಾಥ ಸಾಂಡ್ರಾ (ವಸತಿ ಸಚಿವರು):–

ಅ) ಒಟ್ಟು 447 ಮನೆಗಳು. ಈ ಪೈಕಿ 193 ಮನೆಗಳು ಶೇಕಡಾ 75 ರಷ್ಟು ಕೆಲಸ ಮುಗಿದಿರುತ್ತದೆ. ಉಳಿದ 254 ಮನೆಗಳ ಪೈಕಿ 160 ಮನೆಗಳ ತಳಪಾಯ ಮುಗಿದಿರುತ್ತದೆ. 94 ಮನೆಗಳ ತಳಪಾಯದ ಕೆಲಸ ಮಾಡಬೇಕಾಗಿದೆ.

ಆ) ನವೆಂಬರ್ 92ರಿಂದ ಫೆಬ್ರುವರಿ 93ರ ವರೆಗಿನ ನಾಲ್ಕು ತಿಂಗಳಿನ ಅವಧಿಯಲ್ಲಿ ಹಾಸನ ನಗರದಲ್ಲಿಯ ಕಾಮಗಾರಿ ಕೆಲಸಗಳಿಗಾಗಿ ಒಟ್ಟು ರೂ. 13,41,586-00ಗಳನ್ನು ಖರ್ಚು ಮಾಡಲಾಗಿದೆ. ಈ ಯೋಜನೆಯು ಪುನರ್ ವಿಮರ್ಶಿಸಿದ ಕಾರಣ ಯೋಜನೆಯನ್ನು ಪುನರ್ ಪರಿಶೀಲಿಸುವ ಸಲುವಾಗಿ ಹುಡ್ಕೋ ಸಂಸ್ಥೆಯನ್ನು ಕೋರಲಾಗಿದೆ. ಮಾರ್ಚ್ 93ರ ಅಂತ್ಯದ ವೇಳೆಗೆ ಮಂಡಳಿಗೆ ಸಾಲ ಬಿಡುಗಡೆಯಾಗುವ ನಿರೀಕ್ಷೆ ಇದೆ.

ಇ) ಹಾಸನ ನಗರದ ಬೀರನಹಳ್ಳಿ ಬಡಾವಣೆಯಲ್ಲಿ ಮನೆಯನ್ನು ಹಂಚಿಕೆಗಾಗಿ ಮಾರ್ಚ್ 84ರಲ್ಲಿ ವಿವಿಧ ವರ್ಗಗಳಲ್ಲಿ ಒಟ್ಟು 1402 ಅರ್ಜಿಗಳು ಬಂದಿರುತ್ತವೆ ಹಾಗೂ ರೂ. 40,57,000-00ಗಳು ನೋಂದಣಿ ಶುಲ್ಕ, ಮಂಡಳಿಗೆ ಸಂದಾಯವಾಗಿರುತ್ತದೆ.

ಈ) ಸಾಕಷ್ಟು ಮನೆಗಳನ್ನು ಕಟ್ಟಿ ಹಂಚಿಕೆ ಮಾಡಿದ ಮೇಲೆ ಹಂಚಿಕೆಯಾಗದ ಅರ್ಜಿಗಳಿಗೆ ಅರ್ಜಿದಾರರು ಪಾವತಿ ಮಾಡಿದ ನೋಂದಣಿ ಮೊಬಲಗನ್ನು ಹಿಂದಿರುಗಿಸಲಾಗುವುದು.

ಶ್ರೀ ಬಿ. ಶಿವರಾಮು:– ಮಾನ್ಯ ಅಧ್ಯಕ್ಷರೇ, ಮಾರ್ಚ್ 1983ರಲ್ಲಿ 1400 ಜನರಿಂದ ಸುಮಾರು 40 ಲಕ್ಷ ರೂಪಾಯಿಗಳನ್ನು ಹೌಸಿಂಗ್ ಬೋರ್ಡ್‌ನವರು ತೆಗೆದುಕೊಂಡಿದ್ದಾರೆ. ಆದಾದ ನಂತರ 9 ವರ್ಷ ಆದ ಮೇಲೆ ಪ್ರಗತಿ ಎಷ್ಟು ಎಂದರೆ 447 ಮನೆಗಳನ್ನು ತೆಗೆದುಕೊಂಡಿದ್ದೇವೆ. 193 ಮನೆಗಳು ಶೇಕಡ 75 ಭಾಗ ಕಂಪ್ಲೀಟ್ ಆಗಿದೆ. ಉಳಿದ 254 ಮನೆಗಳ ಪೈಕಿ 160 ಮನೆಗಳ ತಳಪಾಯ